ಶ್ರೀ ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ಮಂತ್ರಿಗಳು).—

ಅ) ಕಕ್ಕೂರ್ ಏತ ನೀರಾವರಿ ೨ನೇ ಹಂತ ಸುಮಾರು ಮೇ ೧೯೯೧ರೊಳಗೆ ಪೂರ್ತಿಗೊಳಿಸುವ ಸಂಭವವಿರುತ್ತದೆ. ಸಿಂಗಟಾಲೂರಿನ ಏತ ನೀರಾವರಿ ಯೋಜನೆಯ ಎರಡನೇ ಹಂತದ ಪರಿಷ್ಕೃತ ಅಂದಾಜು ತಯಾರಿಸುತ್ತಿದ್ದು, ಯೋಜನೆಯ ಅಂದಾಜಿಗೆ ಮಂಜೂರಾತಿ ದೊರೆತ ನಂತರ ಕಾಮಗಾರಿಯನ್ನು ತೆಗೆದುಕೊಳ್ಳಲಾಗುತ್ತದೆ. ಕಕ್ಕೂರು ಏತ ನೀರಾವರಿ ಯೋಜನೆಯ ೧ನೇ ಹಂತದ ನೀರೆತ್ತುವ ಪಂಪುಗಳು ಸರಿಯಾಗಿ ಕೆಲಸ ಮಾಡುತ್ತಿವೆ. ಸಿಂಗಟಾಲೂರು ಏತ ನೀರಾವರಿ ಮೊದಲನೆ ಹಂತದಲ್ಲಿ ೩ ಹೆಂಟ್ರಿಫ್ಯೂಗಲ್ ಪಂಪುಗಳನ್ನು ೧೦ ರಿಂದ ೧೨ ವರ್ಷಗಳ ಹಿಂದೆ ಅಳವಡಿಸಲಾಗಿದ್ದು, ಇದರ ಸಾಮರ್ಥ್ಯ ಕಡಿಮೆಯಾಗಿರುವುದರಿಂದ. ಪಂಪುಗಳನ್ನು ದುರಸ್ತಿಪಡಿಸುವ, ಬದಲಿಸುವ ಕಾರ್ಯವನ್ನು ಹಣದ ಲಭ್ಯತೆಯನ್ನನುಸರಿಸಿ ತೆಗೆದುಕೊಳ್ಳಲಾಗುತ್ತದೆ.

ಆ) ತುಂಗಭದ್ರಾ ಜಲಾಶಯದಲ್ಲಿ ಹೊಸ ಏತ ನೀರಾವರಿ ಯೋಜನೆಗಳಿಗೆ ನೀರೆತ್ತಲು ಅವಕಾಶವಿಲ್ಲದಿರುವುದರಿಂದ ಮುಂಡರಗಿ ತಾಲ್ಲೂಕಿನ ರಾಟಿ ಹಾಗೂ ಅಡವಿ ಹನುಮಾಪ್ಪ ಏತ ನೀರಾವರಿ ಯೋಜನೆಗಳನ್ನು ಕೈಬಿಡಲಾಗಿರುತ್ತದೆ.

ಇ) ಇಲ್ಲ.

ಮುಂಡರಗಿ ತಾಲ್ಲೂಕಿನ ಒಕ್ಕಲುತನ ಹುಟ್ಟುವಳಿ ಮಾರಾಟ ಸಂಘದ ಬಗ್ಗೆ

೬೦. ಶ್ರೀ ಕೆ. ಹೆಚ್. ಕುರುಡಗಿ (ಮುಂಡರಗಿ).—ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮುಂಡರಗಿ ತಾಲ್ಲೂಕಿನಲ್ಲಿಯ ತಾಲ್ಲೂಕು ಒಕ್ಕಲುತನ ಹುಟ್ಟುವಳಿ ಮಾರಾಟ ಸಹಕಾರ ಸಂಘವು (ಟಿ.ಎ.ಪಿ.ಸಿ.ಎಂ.ಎಸ್) ಮುಳುಗುವ ಹಂತಕ್ಕೆ ಬಂದಿದ್ದು ಇದನ್ನು ಯಾವಾಗ ಲಿಕ್ವಿಡೇಶನ್ ಮಾಡಲಾಗುವುದು. ಈ ಬಗ್ಗೆ ಇದುವರೆವಿಗೂ ಸರ್ಕಾರ ಗಮನ ಹರಿಸದಿರಲು ಕಾರಣವೇನು ?

ಆ) ಮುಂಡರಗಿ ತಾಲ್ಲೂಕಿನ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕ್ ರೈತರಿಗೆ ಸಾಲ ಕೊಡದ ಸ್ಥಿತಿಯಲ್ಲಿರುವ ವಿಚಾರವು ಸರ್ಕಾರದ ಗಮನಕ್ಕೆ ಬಂದಿದೆಯೇ. ಈ ಬಗ್ಗೆ ಸರ್ಕಾರವು ಸೂಕ್ತ ಕ್ರಮ ಕೈಗೊಳ್ಳುವುದೇ ?

ಶ್ರೀ ಕೆ. ಹೆಚ್. ಪಾಟೀಲ್ (ಸಹಕಾರ ಸಚಿವರು).—

ಅ) ಮುಂಡರಗಿ ತಾಲ್ಲೂಕು ಒಕ್ಕಲುತನ ಹುಟ್ಟುವಳಿ ಮಾರಾಟ ಸಹಕಾರ ಸಂಘದ ಕಾರ್ಯಚಟುವಟಿಕೆಗಳು ಸ್ಥಗಿತಗೊಂಡಿದ್ದು, ಈ ಸಂಘದ ೧೯೮೩–೮೪ರ ಲೆಕ್ಕ ಪರಿಶೋಧನಾ ವರದಿಯಲ್ಲಿ ಕೆಲವೊಂದು ಪ್ರಮುಖವಾದ ನ್ಯೂನತೆಗಳು ಕಂಡು ಬಂದಿದ್ದರಿಂದ, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ ೬೪ರ ಅನ್ವಯ ವಿಚಾರಣೆ ನಡೆಸಿ ವರದಿ ನಡೆಯಲಾಗಿದೆ. ಸದರಿ ವಿಚಾರಣಾ ವರದಿಯ ಮೇಲೆ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ ೬೮ರ ಅನ್ವಯ ಅನುಪಾಲನಾ ವರದಿಯನ್ನು ಕಳಿಸಲು ಸಂಘದವರನ್ನು ಕೇಳಿದ್ದು ಅನುಪಾಲನೆ ವರದಿ ಬಂದಿರುವುದಿಲ್ಲವಾದ್ದರಿಂದ ಮುಂದಿನ ಕ್ರಮ ಜರುಗಿಸಿರುವುದಿಲ್ಲ. ಸಂಘದವರಿಂದ ವರದಿ ಬಂದ ನಂತರ ಕರ್ನಾಟಕ ಸಹಕಾರ ಸಂಘಗಳ ಕಾಯಿದೆ, ೧೯೫೯ ಕಲಂ ೬೩ರ ಪ್ರಕಾರ ಸಂಘವನ್ನು ಸಮಾಪನಗೊಳಿಸಲು ಸೂಕ್ತ ಕ್ರಮತೆಗೆದುಕೊಳ್ಳಲಾಗುವುದು.

ಆ) ಇಲ್ಲ. (ನಬಾರ್ಡ್ ಆರ್ಹತೆ ಪ್ರಕಾರ ನಿರ್ಬಂಧಿತ IVನೇ ಗುಂಪಿನಲ್ಲಿ ಸಾಲಕೊಡಲು ಅರ್ಹತೆ ಹೊಂದಿದೆ). ಉದ್ಭವಿಸುವುದಿಲ್ಲ.

ಕೋಲಾರ ಜಿಲ್ಲೆಯಲ್ಲಿ ಇತ್ತೀಚೆಗೆ ನಡೆದ ಘರ್ಷಣೆಗಳು

೧೬೩. ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ).—ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಇತ್ತೀಚೆಗೆ ಕೋಲಾರ ಜಿಲ್ಲೆಯ ಯಾವ ಯಾವ ಸ್ಥಳಗಳಲ್ಲಿ ಗಲಭೆಗಳು ನಡೆದಿವೆ ?

ಆ) ಈ ಗಲಭೆಗಳಲ್ಲಿ ಮಡಿದವರ ಸಂಖ್ಯೆ ಎಷ್ಟು ? ಹಾಗೂ ಇವರಲ್ಲಿ ಪೋಲೀಸ್ ಗೋಲಿಬಾರಿನಲ್ಲಿ ಮಡಿದವರ ಸಂಖ್ಯೆ ಎಷ್ಟು ?

ಇ) ಇವರಂಗಳಿಗೆ ಸರ್ಕಾರದಿಂದ ನೀಡಲಾದ ಪರಿಹಾರದ ಮೊತ್ತವೆಷ್ಟು ?

ಈ) ಈ ಗಲಭೆಗಳಲ್ಲಿ ಎಷ್ಟು ಸಾರ್ವಜನಿಕರ ಹಾಗೂ ಸರ್ಕಾರದ ಆಸ್ತಿಪಾಸ್ತಿ ನಷ್ಟ ಆಗಿರುವ ಬಗ್ಗೆ ಅಂದಾಜು ಮಾಡಲಾಗಿದೆ ?

ಉ) ಆಸ್ತಿಗಳನ್ನು ಕಳೆದುಕೊಂಡಿರುವ ಸಾರ್ವಜನಿಕರಿಗೆ ನೀಡಲಾದ ಪರಿಹಾರದ ಮೊತ್ತ ಎಷ್ಟು ?

ಶ್ರೀ ಧರ್ಮಸಿಂಗ್ (ಗೃಹ ಸಚಿವರು).—

ಅ) ಶ್ರೀನಿವಾಸಪುರ, ಕೋಲಾರ ಪಟ್ಟಣ, ಮುಳಬಾಗಿಲು, ಮಾಲೂರು, ಸಗಟೂರು, ಕೋಡಿ ಕಣ್ಣೂರು, ಪೋತನಪಲ್ಲಿ, ಚಿಕ್ಕನಹಳ್ಳಿ, ಬೆಟ್ಟಬಿಣಜೀನಹಳ್ಳಿ, ಕರಿನಾಗಹಳ್ಳಿ, ಕೇಲಸಕೋಣೆ, ವೀರಾಪುರ, ದೇಶಿವಾರ, ಮಂಚೇನಹಳ್ಳಿ, ಚಿಕ್ಕಹಸಾಳ, ಚಿಂತಾಮಣಿ, ಸಂತೆಕಲ್ಲಳ್ಳಿ, ಉತ್ತನೂರು ಕಂಡೆನೂರು, ವಂಗನಹಳ್ಳಿ, ಚಿಕ್ಕಬಳ್ಳಾಪುರ, ಜೊಕ್ಕನಹಳ್ಳಿ, ಗೌರೀಬಿದನೂರು ತಾಲ್ಲೂಕು.

ಆ) ಕೋಮು ಗಲಭೆಗಳಲ್ಲಿ — ೯ ಜನ
ಪೋಲೀಸ್ ಗೋಲಿಬಾರಿನಲ್ಲಿ — ಇಲ್ಲ

ಇ) ರೂ. ೪,೫೦,೦೦೦–೦೦

ಈ) ರೂ. ೧,೮೦,೯೭,೯೫೦–೦೦

ಉ) ರೂ. ೨೨ ೬೮,೬೩೫–೮೦

ಮೈಸೂರು ಲ್ಯಾಂಪ್ಸ್ ಪ್ರಗತಿಯ ಬಗ್ಗೆ

೧೬೧. ಶ್ರೀ ಎಂ. ನಾರಾಯಣ ಸ್ವಾಮಿ (ಬೇತಮಂಗಲ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

ಅ) ಮೈಸೂರು ಲ್ಯಾಂಪ್ಸ್‌ನ ಈಗಿನ ಅಧ್ಯಕ್ಷರ ಹೆಸರೇನು ?

ಆ) ಇವರು ಅಧ್ಯಕ್ಷರಾದ ಮೇಲೆ ಮೈಸೂರು ಲ್ಯಾಂಪ್ಸ್ ಸಾಕಷ್ಟು ಪ್ರಗತಿ ಸಾಧಿಸಿದೆಯೇ ?

ಇ) ಹಾಗಿದ್ದಲ್ಲಿ ಈಗಿರುವ ಅಧ್ಯಕ್ಷರು ಬಂದ ನಂತರ ಮೈಸೂರು ಲ್ಯಾಂಪ್ಸ್‌ನ ವಹಿವಾಟಿನ ಮೊತ್ತವೆಷ್ಟು ಹಾಗೂ ಪ್ರತಿ ವರ್ಷ ಸಂಸ್ಥೆಗೆ ಬಂದಿರುವ ಲಾಭದ ಮೊತ್ತವೆಷ್ಟು (ಪ್ರತಿ ವರ್ಷದ ಬಗ್ಗೆ ಪ್ರತ್ಯೇಕ ಮಾಹಿತಿ ನೀಡುವುದು)

ಈ) ಮೈಸೂರು ಲ್ಯಾಂಪ್ಸ್ ಎಲ್ಲೆಲ್ಲಿ ತನ್ನ ಶಾಖಾ ಕಛೇರಿಗಳನ್ನು ಹೊಂದಿದೆ.

ಉ) ಮೈಸೂರು ಲ್ಯಾಂಪ್ಸ್ ಸಂಸ್ಥೆಯನ್ನು ಇನ್ನಷ್ಟು ಪ್ರಗತಿಪರವಾಗಿ ಮಾಡಲು ಅನುಕೂಲವಾಗುವಂತೆ ರಾಜ್ಯಸರ್ಕಾರದ ಎಲ್ಲಾ ಸಂಸ್ಥೆಗಳು ಮತ್ತು ಇಲಾಖೆಗಳು ಮೈಸೂರು ಲ್ಯಾಂಪ್ಸ್‌ನ ಉತ್ಪನ್ನಗಳನ್ನೇ ಖಡ್ಡಾಯವಾಗಿ ಕೊಂಡುಕೊಳ್ಳಬೇಕೆಂಬ ನಿಯಮವನ್ನು ರೂಪಿಸಲು ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು).—

ಅ) ಶ್ರೀ ಸಿ. ಮುನಿಸ್ವಾಮಿ, ಐ.ಎ.ಎಸ್.

ಆ) ಹೌದು.

ಇ)

	೧೯೮೭–೮೮ ರೂ.	೧೯೮೮–೮೯ ರೂ.	೧೯೮೯–೯೦ ರೂ.
ವಹಿವಾಟು ಮೊತ್ತ	೨೫.೩೦ ಕೋಟಿ	೨೩.೯೮ ಕೋಟಿ	೪೧.೬೦ ಕೋಟಿ
ಲಾಭ (ನಿವ್ವಳ) ತೆರಿಗೆಗೆ ಮುನ್ನ ಲಾಭ	೧೮.೬೦ ಲಕ್ಷಗಳು	೧೮.೯೨ ಲಕ್ಷಗಳು	೫೯.೯೯ ಲಕ್ಷಗಳು